ವಿಷಯ : - ಮುಳಬಾಗಿಲ ಪಟ್ಟಣದಲ್ಲಿ ಗುರುಭವನ ಕಟ್ಟಲು ಮಂಜೂರಾತಿ.
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 336(400)

ಶ್ರೀ ಎಂ.ವಿ. ವೆಂಕಟಪ್ಪ(ಮುಳಬಾಗಿಲು)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮುಳಬಾಗಿಲು ಪಟ್ಟಣದಲ್ಲಿ ಗುರುಭವನ ಕಟ್ಟಲು ಸರ್ಕಾರದವರು ಮಂಜೂರಾತಿ ನೀಡಿದ್ದು ಯಾವಾಗ?

ಆ) ಕಟ್ಟಡದ ನಿರ್ಮಾಣ ಕಾರ್ಯವನ್ನು ಇನ್ನೂ ಪ್ರಾರಂಭ ಮಾಡದಿರಲು ಕಾರಣಗಳೇನು.

ಇ) ಸದರಿ ಕಟ್ಟಡವನ್ನು ಆದಷ್ಟು ಬೇಗನೆ ಕಟ್ಟಲು ಸರಕಾರದವರು ಕ್ರಮ ಕೈಗೊಳ್ಳುವರೇ.

ಶ್ರೀಮತಿ ನಾಗಮ್ಮ ಸಿ.ಕೇಶವಮೂರ್ತಿ
(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಮಂಜೂರಾತಿ ನೀಡಿರುವುದಿಲ್ಲ.

ತಾಲ್ಲೂಕು ಮಟ್ಟದಿಂದ ಇನ್ನೂ ಪ್ರಸ್ತಾವನೆ ಬರದೇ ಇರುವುದರಿಂದ.

ಪ್ರಸ್ತಾವನೆ ಬಂದಲ್ಲಿ ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಅಧ್ಯಕ್ಷರು : - ಪಟ್ಟಿಯನ್ನು ಮಂಡಿಸಲಾಯಿತು.

ನಿಯಮ 166ರ ಮೇರೆಗೆ ಶ್ರೀ ವೀರಪ್ಪಮೊಯ್ಲಿ ಸಚಿವ ಸಂಪುಟದ ಮೇಲೆ ಅವಿಶ್ವಾಸ ನಿರ್ಣಯ ಮಂಡನೆಗೆ ಅನುಮತಿ ಕೋರಿಕೆ.

(ವಿರೋಧ ಪಕ್ಷದ ನಾಯಕರು)

ಶ್ರೀ ಆರ್.ವಿ.ದೇಶಪಾಂಡೆ : - ಮಾನ್ಯ ಅಧ್ಯಕ್ಷರೇ, ನಾವು ಕರ್ನಾಟಕ ವಿಧಾನಸಭಾ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 166ರ ಅಡಿಯಲ್ಲಿ ಅವಿಶ್ವಾಸ ಠರಾವು ಮಂಡಿಸಬೇಕೆಂದು ಈಗಾಗಲೇ ಒಂದು ಮೋಷನ್‌ನನ್ನೂ ಮಾನ್ಯ ಕಾರ್ಯದರ್ಶಿಯವರಿಗೆ ಕಳುಹಿಸಿದ್ದೇವೆ. ಈ ಮೋಷನ್‌ನನ್ನು ನಮ್ಮ ಪಕ್ಷದವರು, ಬಿ.ಜೆ.ಪಿ.ಯವರು ಮತ್ತು ಕರ್ನಾಟಕ ರೈತ ಸಂಘ ಮತ್ತು ಕನ್ನಡ ಚಳುವಳಿ ನಾಯಕ ಶ್ರೀ ವಾಟಾಳ್‌ನಾಗರಾಜ್‌ರವರು ತಮ್ಮ ಅನುಮತಿಗಾಗಿ ಕೊಟ್ಟಿದ್ದಾರೆ. ಹಾಗಾಗಿ ತಾವು ಈ ಮೋಷನ್ನನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ : - ಸಭಾನಾಯಕರು ಒಪ್ಪಿಗೆ ಕೊಟ್ಟರೆ ಈ ಒಂದು ಅವಿಶ್ವಾಸ ನಿರ್ಣಯದ ಮೇಲೆ ಚರ್ಚೆ ಪ್ರಾರಂಭ ಮಾಡುವುದಕ್ಕೆ ಅವಕಾಶ ಮಾಡಿಕೊಡಲಿ.

ಶ್ರೀ ಆರ್.ವಿ ದೇಶಪಾಂಡೆ : - ಮಾನ್ಯ ಮುಖ್ಯಮಂತ್ರಿಗಳು ರಿಪ್ಲೈ ಕೊಡುವುದಕ್ಕೆ ಇಷ್ಟಪಡುವುದಿಲ್ಲ ಎಂದು ಕಾಣುತ್ತದೆ. ಮಾನ್ಯ ಅಧ್ಯಕ್ಷರೇ, ನಾವು ಏನು ಒಂದು ಮೋಷನ್ ಕೊಟ್ಟಿದ್ದೇವೆ ಅಂದರೆ ಈ ಸದನದ ಶ್ರೀ ಎಂ. ವೀರಪ್ಪ ಮೊಯಿಲಿಯವರ ಸಚಿವ ಸಂಪುಟದ ಮೇಲೆ...

ಶ್ರೀ ವಾಟಾಳ್‌ನಾಗರಾಜ್ : - ಈಗ ನಾವು ಅವಿಶ್ವಾಸ ನಿರ್ಣಯವನ್ನು ಮಂಡಿಸಿದ್ದೇವೆ. ಅದನ್ನು ಚರ್ಚೆಗೆ ಯಾವಾಗ ತೆಗೆದುಕೊಳ್ಳಬೇಕು ಎನ್ನುವುದನ್ನು ತಾವು ಹೇಳಬೇಕು. ಮೊದಲು ಇದನ್ನು ಮಂಡಿಸುವುದಕ್ಕೆ ಅನುಮತಿಯನ್ನು ತಾವು ಕೊಡಬೇಕು.

ಶ್ರೀ ಆರ್.ವಿ. ದೇಶಪಾಂಡೆ : – ನಾವು ಏನು ಈಗ ಈ ಮೋಷನ್ ಮೂವ್ ಮಾಡಿದ್ದೇವೆ, ಅದಕ್ಕೆ ತಾವು ಪರ್ಮಿಷನ್ ಕೊಟ್ಟರೆ, ಈ ಸದನದ ಶ್ರೀ ಎಂ. ವೀರಪ್ಪಮೊಯಿಲಿಯವರ ಸಚಿವ ಸಂಪುಟದ ಮೇಲೆ ನಮ್ಮ ಅವಿಶ್ವಾಸ ನಿರ್ಣಯವನ್ನು ಮಂಡಿಸುತ್ತೇನೆ. ಇದಕ್ಕೆ ತಾವು ಅನುಮತಿಯನ್ನು ಕೊಡಿ ಎಂದು ನಾನು ಕೇಳುತ್ತಿದ್ದೇನೆ. ತಾವು ಅನುಮತಿ ಕೊಟ್ಟರೆ ತಮ್ಮ ಆದೇಶ ಆದನಂತರ ನಮ್ಮಲ್ಲಿ ಆ ಸ್ಟೆಂಥ್ ಇದೆಯೋ ಎಂದು ತಾವು ನೋಡಬೇಕಾಗುತ್ತದೆ. ತದನಂತರ ತಾವು ಸಭಾನಾಯಕರನ್ನು ಯಾವಾಗ ಚರ್ಚೆ ಮಾಡಬಹುದು ಎಂದು ಕೇಳಬಹುದು.

ಶ್ರೀ ಎಂ. ವೀರಪ್ಪಮೊಯ್ಲಿ : – ಮಾನ್ಯ ವಿರೋಧಪಕ್ಷದ ನಾಯಕರು ಕರ್ನಾಟಕ ರಾಜ್ಯದ ರೈತ ಸಂಘದ ಅಧ್ಯಕ್ಷರಾದ ಪ್ರೊ. ನಂಜುಂಡ ಸ್ವಾಮಿಯವರು, ಬಿ.ಜೆ.ಪಿಯವರು ಎಲ್ಲರೂ ಅವಿಶ್ವಾಸ ನಿರ್ಣಯವನ್ನು ಮಂಡಿಸಿದ್ದಾರೆ. ಈಗ ಈ ಅವಿಶ್ವಾಸ ಸೂಚಿಸುವ ಪ್ರಶ್ನೆ ಏಕೆ ಬಂತು ಎಂದು ನನಗೆ ಅರ್ಥವಾಗುತ್ತಾ ಇಲ್ಲ.

(ಗೊಂದಲ)

ಶ್ರೀ ಸಿ. ಬೈರೇಗೌಡ : – ನಾವು ಚರ್ಚೆಗ ಅವಕಾಶ ಕೊಡಿ ಎಂದರೆ ಉತ್ತರ ಏಕೆ ಬಂತು?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : – ನೀವು ನಿಮ್ಮ ಪಕ್ಷದ ಸದಸ್ಯರನ್ನು ಕೇಳಬೇಕು.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : – ನಾವು ಏಕೆ ಮಂಡನೆ ಮಾಡಿದ್ದೇವೆ ಎಂದು ಕೇಳಿ ಅದನ್ನು ನಾವು ಹೇಳುತ್ತೇವೆ.

ಶ್ರೀ ವಾಟಾಳ್‌ನಾಗರಾಜ್ : – ಅವಿಶ್ವಾಸ ನಿರ್ಣಯವನ್ನು ಮಂಡಿಸುವುದಕ್ಕೆ ತಾವು ಅನುಮತಿಯನ್ನು ಕೊಡಿ. ಚರ್ಚೆ ಆದನಂತರ ಮುಖ್ಯಮಂತ್ರಿಗಳು ಇದರ ಬಗ್ಗೆ ಉತ್ತರ ಕೊಡಲಿ.

ಶ್ರೀ ಎಂ. ವೀರಪ್ಪಮೊಯಿಲಿ : – ಆಯಿತು, ಆಯಿತು, ಉತ್ತರವನ್ನು ನಾನು ಈಗ ಕೊಡುತ್ತಾ ಇಲ್ಲ.

ಶ್ರೀ ವಾಟಾಳ್‌ನಾಗರಾಜ್ : – ತಾವು ಯಾವುದಕ್ಕೋಸ್ಕರ ಮಂಡಿಸುತ್ತಿದ್ದೀರಿ ಎಂದು ಶುರು ಮಾಡಿದಿರಲ್ಲ, ಅದಕ್ಕೆ ತಾವು ಉತ್ತರಾನೇ ಪ್ರಾರಂಭ ಮಾಡಿದಿರೇನೋ ಎಂದುಕೊಂಡಿದ್ದೆವು.

ಶ್ರೀ ಸಿ.ಬೈರೇಗೌಡ : – ಮುಖ್ಯಮಂತ್ರಿಗಳ ಅಭಿಪ್ರಾಯದಲ್ಲಿ ಬಹುಶಃ ನಮ್ಮ ಕಡೆಯಿಂದ ಇದು ಬರಬಾರದಾಗಿತ್ತು. ಇದು ಅವರ ಕಡೆಯಿಂದ ಬರಬೇಕಾಗಿತ್ತು ಎಂದು ಅನ್ನಿಸುತ್ತದೆ. ಏಕೆಂದರೆ ಆಡಳಿತ ಪಕ್ಷದವರು ಮಾಡಬೇಕಾಗಿರುವ ಕೆಲಸ ವಿರೋಧಪಕ್ಷದವರು ಮಾಡುತ್ತಿದ್ದಾರಲ್ಲ ಎನ್ನತಕ್ಕಂಥಾದ್ದು ಇರಬೇಕು ತಮಗೆ.

ಶ್ರೀ M.VEERAPPA MOILY : I am on my legs.

Sri M.Veerappa Moily : I am not objecting. From our side we have no objection to take it up right now. We are prepared to take it up right now, not even tomorrow.

ನಾಳೆಗೂ ಕಾಯಬೇಡಿ ನೀವು. ಇವತ್ತೇ ಮಾಡಿ, ಅದಕ್ಕೆ ನಾನು ಏನೂ ಆಕ್ಷೇಪಣೆ ಮಾಡುತ್ತಾ ಇಲ್ಲ. ನಾನು ಪ್ರಾಸ್ತವಿಕವಾಗಿ ಎದ್ದು ಮಾತನಾಡಿದ್ದು ಅಷ್ಟೆ; ಏಕೆ ಈ ಪ್ರಶ್ನೆ ಬಂತು ಎಂದು ನನ್ನಲ್ಲೇ ಪ್ರಶ್ನೆ ಮಾಡಿದ್ದೇನೆ. I am not questioning you that why you have raised it. ಏಕೆ ಬಂತು ಎಂದು ನನಗೆ ನಾನೇ ಪ್ರಶ್ನೆ ಮಾಡುತ್ತಿದ್ದೇನೆ. I have not bartered away the interest of the State at any cost.

ಆದುದರಿಂದ ಸನ್ಮಾನ್ಯ ಅಧ್ಯಕ್ಷರೇ ಇದು ಇವತ್ತೇ ಪ್ರಾರಂಭವಾಗಲಿ. ತಾವು ಅದಕ್ಕೆ ಸಮಯ ನಿಗದಿ ಮಾಡಿ, ಇದು ನಾಳೆ ನಾಡಿದ್ದು ಪ್ರಾರಂಭ ಮಾಡೋಣ ಎನ್ನುವುದು ಬೇಡ.

Sri R.V. Deshpande : The Speaker has to ask for the permission and he has to seek my support. If in case I support, then it will start.

ಅಧ್ಯಕ್ಷರು :- ಕರ್ನಾಟಕ ವಿಧಾನಸಭೆಯ ಕಾರ್ಯ ವಿಧಾನ ಮತ್ತು ನಡವಳಿಯ ನಿಯಮ 160ರ ಅಡಿಯಲ್ಲಿ ಅವಿಶ್ವಾಸ ನಿರ್ಣಯ ಮಂಡನೆಯನ್ನು ಕೊಟ್ಟಿರುತ್ತಾರೆ. ಈ ಸದನ ಶ್ರೀ ಎಂ. ವೀರಪ್ಪ ಮೊಯಿಲಿಯವರ ಸಚಿವ ಸಂಪುಟದ ಮೇಲೆ ಒಂದು ಅವಿಶ್ವಾಸ ನಿರ್ಣಯ ವ್ಯಕ್ತ ಮಾಡುತ್ತದೆ. ಅದೇ ರೀತಿಯಲ್ಲಿ ಇದನ್ನು ಬೆಳಿಗ್ಗೆ 9-45ಕ್ಕೆ ಅವರು ಕೊಟ್ಟಿದ್ದಾರೆ. ಅದೇ ರೀತಿ ಮಾನ್ಯ ಪ್ರೊ. ನಂಜುಂಡಸ್ವಾಮಿಯವರು, ಮತ್ತು ಬಾಬಾಗೌಡ ಪಾಟೀಲ್ ಅವರು ಸುಮಾರು 11-35ಕ್ಕೆ ಕೊಟ್ಟಿದ್ದಾರೆ. ಅದಕ್ಕೆ ಇದನ್ನು ನಾನು ತಡೆಹಿಡಿಯುತ್ತೇನೆ. ಬೇಕಾದರೆ ಅವರು ಇದಕ್ಕೆ ಸಪೋರ್ಟ್ ಮಾಡಬಹುದು.

1.00 ಪಿ.ಎಂ.

ಮಾನ್ಯ ವಿರೋಧಪಕ್ಷದ ನಾಯಕರಾದ ಮಾನ್ಯ ಆರ್.ವಿ.ದೇಶಪಾಂಡೆಯವರು ಹಾಗೂ ಇನ್ನಿತರ ವಿರೋಧಪಕ್ಷದ ಸದಸ್ಯರುಗಳು ನಿಯಮ 166ರ ಅಡಿಯಲ್ಲಿ ಸರ್ಕಾರದ ಮೇಲೆ ಅವಿಶ್ವಾಸ ಸೂಚನೆಯನ್ನು ಕಳುಹಿಸಿಕೊಟ್ಟಿದ್ದಾರೆ. ಈ ಪ್ರಸ್ತಾವಕ್ಕೆ ಮಾನ್ಯ ದೇಶಪಾಂಡೆಯವರು ಸಭೆಯ ಅನುಮತಿಯನ್ನು ಪಡೆಯಬೇಕಾಗುತ್ತದೆ. ತಾವು ಈಗ ಸಭೆಯ ಅನುಮತಿಯನ್ನು ಪಡೆಯಬಹುದು.

ಶ್ರೀ ಆರ್.ವಿ. ದೇಶಪಾಂಡೆ :- ಈಗ ಸಭೆಯ ಅನುಮತಿಯನ್ನು ಪಡೆಯುತ್ತೇನೆ.

ಅಧ್ಯಕ್ಷರು :- ಈ ಪ್ರಸ್ತಾವಕ್ಕೆ ಸದಸ್ಕರ ಅನುಮೋದನೆಯ ಅವಶ್ಯಕತೆ ಇರುತ್ತದೆ. ಆದಕಾರಣ ಈ ಅವಿಶ್ವಾಸ ಸೂಚನೆಗೆ ಬೆಂಬಲ ಸೂಚಿಸುವ ಸದಸ್ಕರು ಅವರ ಸ್ಥಾನದಲ್ಲಿ ಎದ್ದು ನಿಲ್ಲಬೇಕು.

(ಎಲ್ಲ ವಿರೋಧಪಕ್ಷಗಳ ಮಾನ್ಯ ಸದಸ್ಕರು ಎದ್ದು ನಿಲ್ಲುವರು)

(ಗೊಂದಲ)

ಶ್ರೀ ವಾಟಾಳ್‌ನಾಗರಾಜ್ :- ಮಾನ್ಯ ಮುಖ್ಯಮಂತ್ರಿಗಳು ಹೇಳಿರುವುದು ಸತ್ಯವಾಯಿತು. ನಾವು ಅವರು ಗಂಡಹೆಂಡತಿ ಇದ್ದಹಾಗೆ ಎಂದು ಹೇಳಿದ್ದಾರೆ. ಇವರ ಕಿತ್ತಾಟದಲ್ಲಿ ಯಾರು ಗಂಡ, ಯಾರು ಹೆಂಡತಿ ಎನ್ನುವುದು ತೀರ್ಮಾನವಾಗಬೇಕು.

ಶ್ರೀ ಎಂ.ಮಹದೇವ್ :- ಮಾನ್ಯ ವಾಟಾಳ್‌ನಾಗರಾಜ್‌ರವರೇ ನಾವೇನು ಡೈವರ್ಸ್ ಮಾಡಿಕೊಳ್ಳುವುದಿಲ್ಲ. ತಾವು ಗಾಬರಿಯಾಗಬೇಡಿ.

ಅಧ್ಯಕ್ಷರು : -ಈ ಪ್ರಸ್ತಾವನೆಗೆ 27ಜನ ಮಾನ್ಯ ಸದಸ್ಯರುಗಳು ಅನುಮೋದನೆ ಕೊಟ್ಟಿದ್ದಾರೆ. ಅದಕ್ಕಾಗಿ ಈ ಪ್ರಸ್ತಾವನೆಯನ್ನು ಅಂಗೀಕರಿಸಲಾಗಿದೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : - ಮಾನ್ಯ ಅಧ್ಯಕ್ಷರೇ, ಪ್ರಸ್ತಾವನೆಯನ್ನು ಇವತ್ತೇ ಪರಿಶೀಲನೆಗೆ ತೆಗೆದುಕೊಳ್ಳಬೇಕೆಂಬುದರಲ್ಲಿ ಅಡ್ಡಿ ಏನೂ ಇಲ್ಲ.

Sri K.B.koliwad : - Point of Order, Sir.

ಅಧ್ಯಕ್ಷರು : - ಮಾನ್ಯ ಕೋಳಿವಾಡ್ ಅವರೇ ತಾವು ಹೇಳಿ.

Sri K.B.Koliwad : Sir, Point of Order, Sir. It cannot be taken up today. According to Rule 166 (2), "If the Speaker is of the opinion that the motion is in order, he shall read the motion to the House and shall request those members who are in favour of leave being granted to rise in their places and if not less than twenty-three members rise, accordingly, the Speaker shall intimate that leave is granted and that the motion will be taken up the next day, or within three days thereafter as the Speaker decides. If less than 23 Members rise..." This motion cannot be taken up today. At the earliest it can be taken up tomorrow.

ಶ್ರೀ ಬಿ.ಎಸ್.ಯಡಿಯೂರಪ್ಪ : - ಮಾನ್ಯ ಅಧ್ಯಕ್ಷರೇ ಹಿಂದೆ ಇದೇ ಸದನದಲ್ಲಿ ಇದೇ ಸರ್ಕಾರದ ವಿರುದ್ಧ ಅವಿಶ್ವಾಸ ನಿರ್ಣಯವನ್ನು ಮಂಡನೆ ಮಾಡಿದಾಗ ಅವತ್ತು ನಾವು ಮೂವ್ ಮಾಡಿದ ದಿವಸವೇ ಚರ್ಚೆಗೆ ಅವಕಾಶ ಮಾಡಿಕೊಡಲಾಯಿತು. ನಿಮಗೆ ಪರಮಾಧಿಕಾರವಿದೆ. ರೂಲ್ಸ್ ಎಲ್ಲವನ್ನು ಸಸ್‌ಪೆಂಡ್‌ಮಾಡಿ ಚರ್ಚೆ ಪ್ರಾರಂಭ ಮಾಡಲು ಅವಕಾಶ ಮಾಡಿಕೊಡಲು ತಮಗೆ ಅಧಿಕಾರವಿದೆ. ದಯವಿಟ್ಟು ಮಾನ್ಯ ಸಭಾನಾಯಕರು ಒಪ್ಪಿಕೊಂಡಿರುತ್ತಾರೆ. ಆದ್ದರಿಂದ ಈಗ ಚರ್ಚೆಗೆ ತಾವು ಅವಕಾಶವನ್ನು ಮಾಡಿಕೊಡಿ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : - ಮಾನ್ಯ ಅಧ್ಯಕ್ಷರೇ, ತಮಗೆ ರೆಸ್ಟ್ರೂಡರಿ ಪವರ್ ಇದೆ. ಆರ್ಟಿಕಲ್ 3 ರೂಲ್‌ನಂಬರ್ 45ರ ಪ್ರಕಾರ ರೂಲ್ಸನ್ನು ಸಸ್‌ಪೆಂಡ್ ಮಾಡುವ ಅಧಿಕಾರವೂ ತಮಗಿದೆ. ಆದ್ದರಿಂದ ವಿರೋಧಪಕ್ಷದವರೆಲ್ಲರೂ ಒಪ್ಪಿರುವುದರಿಂದ ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

(ಗೊಂದಲ)

ಶ್ರೀ ಎ.ಕೆ. ಆನಂತಕೃಷ್ಣ : - ಇವತ್ತೇ ತೀರ್ಮಾನ ತೆಗೆದುಕೊಳ್ಳಬೇಕೆಂಬುದಕ್ಕೆ ಅವರಿಗೆ ಅಂಥ ಆರ್ಜೆಂಟ್ ಬಂದಿದೆಯೇ ಎಂದು ಕೇಳುತ್ತೇನೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : - ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಸಭಾನಾಯಕರು ತಕ್ಷಣ ಈ ಪ್ರಸ್ತಾವನೆಯನ್ನು ತೆಗೆದುಕೊಳ್ಳಲಿಕ್ಕೆ ಒಪ್ಪಿಕೊಂಡಿರುತ್ತಾರೆ. ನಾವೂ ಕೂಡ ರೆಡಿ ಇದ್ದೇವೆ, ಅದಕ್ಕಾಗಿ

ತಾವು ಸಮಯವನ್ನು ನಿಗದಿ ಮಾಡಬೇಕಾಗುತ್ತದೆ. ಇಷ್ಟು ಸಮಯವೆಂದು ತಾವು ನಿಗದಿ ಮಾಡಬೇಕು. ಸಮಯ ನಿಗದಿ ಮಾಡುವುದು ಬಹಳ ಆವಶ್ಯಕತೆ ಇದೆ.

ಅಧ್ಯಕ್ಷರು :- ಕೋಳಿವಾಡ ಅವರೆ, ತಾವು ಓದಿ ಹೇಳಿದಿರಿ. ಇವತ್ತಿನ ಈ ಸೂಚನೆಗೆ ಸಭಾನಾಯಕರು ಒಪ್ಪಿಕೊಂಡಿದ್ದಾರೆ ಮತ್ತು ನಾನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಬರತಕ್ಕ ವಿಷಯದ ಬಗ್ಗೆ ಇವತ್ತೇ ಈ ಚರ್ಚೆಗೆ ಅಸ್ಪದ ಕೊಡುತ್ತಿದ್ದೇನೆ

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ :- ಇದಕ್ಕೆ ಸಮಯ ನಿಗದಿ ಮಾಡಬೇಕಾಗುತ್ತದೆ ಇದು ಬಹಳ ಆವಶ್ಯಕವಿದೆ.

Sri K.B. Koliwad : Speaker, Sir. I have a point of order. As per rule 344, wherein the Speaker is empowered to suspend any rule...

ಶ್ರೀ ಹಾರ್ನಳ್ಳಿ ರಾಮಸ್ವಾಮಿ :- ಅಧ್ಯಕ್ಷರ ತೀರ್ಮಾನವನ್ನು ಪ್ರಶ್ನೆ ಮಾಡುವ ಅಧಿಕಾರ ಯಾರಿಗೂ ಇಲ್ಲ.

Sri K.B. Koliwad : I am not questioning the order of the Speaker. I am bringing to the notice of the Hon'ble Speaker.

Sri D.B.Chandre Gowda: He has already ruled that there is no point of order.

Sri R.V. Deshpande : To support our Motion he is not mentally prepared. So he is asking for time.

Sri K.B. Koliwad : The Hon'ble Law Minister has suggested to suspend the rule and to take up this.

ಶ್ರೀ ಬಿ.ಎಸ್. ಯಡಿಯೂರಪ್ಪ :- ನಮ್ಮ ನಿಯಮಾವಳಿ ಪ್ರಕಾರ ನಿಮ್ಮ ತೀರ್ಮಾನದ ವಿರುದ್ಧ ಪಾಯಿಂಟ್ ಆಫ್ ಆರ್ಡರ್ ಇಲ್ಲ. ಅದಕ್ಕೆ ಅವಕಾಶ ಇಲ್ಲ.

ತಾವು ಒಂದು ಸಾರಿ ತೀರ್ಪು ಕೊಟ್ಟಮೇಲೆ ರೂಲ್ ಸಸ್ಪೆಂಡ್ ಮಾಡುವ ಅವಕಾಶ ಕೊಟ್ಟಾದ ಮೇಲೆ ನಿಮ್ಮ ರೂಲಿಂಗ್ ಮೇಲೆ ಪಾಯಿಂಟ್ ಆಫ್ ಆರ್ಡರ್ ಎತ್ತುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು :- ಈ ವಿಷಯದ ಬಗ್ಗೆ ನಾನು ತೀರ್ಮಾನ ಕೊಟ್ಟಿದ್ದೇನೆ.

ಶ್ರೀ ಕೆ.ಬಿ. ಕೋಳಿವಾಡ : ತೀರ್ಮಾನ ಅಲ್ಲ. I will bring it to your notice. Under Rule 344 suspension of Rule is not arbitrary. We have to follow some procedures. A Motion has to be moved and it is to be carried in the House and then only the Speaker is empowered to suspend the rule.

Mr. Speaker : The Motion is already moved, and it is in order.

Sri K.B. Koliwad: Not that motion, but the motion to suspend the other rules. That motion has to be moved. That Motion is not moved. I am

not speaking about the No Confidence Motion. The Motion to suspend the rules is to be moved. That is not moved and carried. How can you suspend the rules?

ಅಧ್ಯಕ್ಷರು : ಸಭಾನಾಯಕರು ಒಪ್ಪಿಕೊಂಡನಂತರ I have taken this decision and we will start the discussion after lunch break at 2.00 O'clock. ಈಗ ಸಭೆ ಮುಂದುವರೆದು ಮತ್ತೆ ಎರಡು ಗಂಟೆಗೆ ಭೇಟಿಯಾಗೋಣ.

(ಸದನವು ಮಧ್ಯಾಹ್ನ 1.08 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ 2 ಗಂಟೆಗೆ ಸಮಾವೇಶಗೊಳ್ಳುವುದಾಗಿ ತೀರ್ಮಾನವಾಯಿತು)

ಸದನವು ಪುನಃ ಮಧ್ಯಾಹ್ನ 2-35ಕ್ಕೆ ಪ್ರಾರಂಭವಾಯಿತು.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು.)

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ.

ವಿಷಯ :- ರಾಯಚೂರು ನಗರದಲ್ಲಿ ಮಳೆಯ ಅನಾಹುತದಿಂದ ಬಹಳ ತೊಂದರೆಯುಂಟಾಗಿರುವ ಬಗ್ಗೆ.

ಶ್ರೀ ಎಂ.ಎಸ್. ಪಾಟೀಲ್(ಸಂಕೇಶ್ವರ) :- ಮಾನ್ಯ ಅಧ್ಯಕ್ಷರೇ, ಈಗ ಬಹಳ ಪ್ರಮುಖವಾದ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೀರಿ, ನಾನು ಅದಕ್ಕೆ ತೊಂದರೆ ಕೊಡತಕ್ಕಂಥ ಅವಶ್ಯಕತೆ ಇಲ್ಲ. ಆದರೆ ನಮ್ಮ ರಾಯಚೂರು ನಗರದಲ್ಲಿ ನಿನ್ನೆ ಮಳೆಯ ಅನಾಹುತದಿಂದ ಬಹಳ ನಷ್ಟಕ್ಕೆ ಒಳಗಾಗಿದೆ. ಸರ್ಕಾರದ ಕಡೆಯಿಂದ ಒಂದು ಹೇಳಿಕೆಯನ್ನು ನಾನು ನಿರೀಕ್ಷಣೆ ಮಾಡುತ್ತೇನೆ. ಸುಮಾರು 5ಸಾವಿರ ಮನೆಗಳು ಬಿದ್ದುಹೋಗಿ 20ಸಾವಿರ ಜನರು ನಿರ್ಗತಿಕರಾಗಿದ್ದಾರೆ. ಇಂಥ ಒಂದು ತೊಂದರೆ ಆ ನಗರದಲ್ಲಿ ಆಗಿರತಕ್ಕಂಥ ಘಟನೆಯಾಗಿದೆ. ಈ ವಿಷಯವನ್ನು ಹೆಚ್ಚಿಗೆ ಪ್ರಸ್ತಾಪ ಮಾಡತಕ್ಕಂಥ ಅವಶ್ಯಕತೆ ಇಲ್ಲ, ಸರ್ಕಾರದ ಕಡೆಯಿಂದ ಏನು ಕ್ರಮ ತೆಗೆದುಕೊಂಡಿರುತ್ತಾರೆ ಎನ್ನತಕ್ಕಂಥದ್ದನ್ನು ಅವರು ಹೇಳಿಕೆಯ ಮೂಲಕ ಹೇಳಲಿ ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್‌ನಾಗರಾಜ್(ಚಾಮರಾಜನಗರ) :- ಮಾನ್ಯ ಅಧ್ಯಕ್ಷರೇ, 5000 ಮನೆಗಳು ಮಳೆ ನೀರಿಗೆ ಆಹುತಿಯಾಗಿವೆ ಎನ್ನುವ ಪ್ರಶ್ನೆ ಬಂದಿರುವುದರಿಂದ ಸರ್ಕಾರ ಈ ಕೂಡಲೇ ತೆಗೆದುಕೊಂಡಿರತಕ್ಕಂಥ ಕ್ರಮಗಳೇನು? ನನಗನಿಸುತ್ತದೆ ಅಲ್ಲಿಂದ ಟೆಲಿಗ್ರಾಮಗಳು ಬರುತ್ತಿವೆ, ಅಲ್ಲಿಂದ ಜನರು ಮಾತನಾಡುತ್ತಿದ್ದಾರೆ, ಅವರ ಕಷ್ಟ ಹೇಳುತ್ತಿದ್ದಾರೆ. ಆದರೂ ಇದುವರೆವಿಗೂ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ರಾಯಚೂರಿನಲ್ಲಿ ಮಳೆಯ ಅನಾಹುತದಿಂದ 5000 ಮನೆಗಳು ಅಂದರೆ 20 ಸಾವಿರ ಕುಟುಂಬಗಳು ಬೀದಿಪಾಲಾಗಿದ್ದಾವೆ. ಈ ಪರಿಸ್ಥಿತಿಯಲ್ಲಿ ಸರ್ಕಾರದವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ಅತ್ಯಂತ ಪ್ರಮುಖವಾಗಿ ನಾವು ಕೇಳುತ್ತಿರುವ ಪ್ರಶ್ನೆಯಾಗಿದೆ. ಆದ್ದರಿಂದ ಇವತ್ತೇ ಸರ್ಕಾರದವರು ಕೈಗೊಂಡಿರತಕ್ಕಂಥ ಕ್ರಮಗಳೇನು ಎಂಬುದನ್ನು ಹೇಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) :- ಮಾನ್ಯ ಅಧ್ಯಕ್ಷರೇ, ಬೇರೆಬೇರೆ ಜಿಲ್ಲೆಗಳಲ್ಲಿಯೂ ಕೂಡ 24 ಗಂಟೆಗಳಕಾಲ ಸತತವಾಗಿ ಮಳೆಯಾಗಿ ಅನಾಹುತಕ್ಕೆ ಒಳಪಟ್ಟಿವೆ. ಬೇರೆ ಬೇರೆ ಜಿಲ್ಲೆಗಳಲ್ಲಿಯೂ ಈ ರೀತಿ ಅನಾಹುತಗಳಾಗಿವೆ. ಅನೇಕರು ತಮ್ಮ ಮನೆಗಳನ್ನು